**ಕರ್ನಾಟಕ ಸರ್ಕಾರ**

ಸಂಖ್ಯೆ:ಬಿಟಿಇ/03/ಇಬಿಎಲ್(1) 2019-20

ಕಾರ್ಯದರ್ಶಿಯವರ ಕಚೇರಿ,
ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01,
ದಿನಾಂಕ: 25-11-2019.

**ಸುತ್ತೋಲೆ**

**ವಿಷಯ:** ಸರ್ಕಾರಿ ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಬೋದಕ/ ಬೋಧಕೇತರ/ಸಿಬ್ಬಂದಿಯವರು ಸೆಮಿಸ್ಟರ್ ಪರೀಕ್ಷೆಗಳ ಕೇಂದ್ರ ಮೌಲ್ಯಮಾಪನ/ ಮರು ಮೌಲ್ಯಮಾಪನದ ಸಂಭಾವನೆ/ ಪ್ರಯಾಣ ಭತ್ಯೆ, ದಿನಭತ್ಯೆ ಬಿಲ್ಲುಗಳೊಂದಿಗೆ ಸಲ್ಲಿಸಬೇಕಾದ ಪೂರಕ ದಾಖಲೆ ಹಾಗೂ ಇನ್ನಿತರ ವಿಷಯಗಳ ಕುರಿತು.

-0-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಗಮನ ಸೆಳೆಯುತ್ತಾ ಲಿಖಿತ ಪರೀಕ್ಷೆಯ ಮೌಲ್ಯ ಮಾಪನ ಮತ್ತು ಮರು ಮೌಲ್ಯಮಾಪನದ ಬಿಲ್ಲುಗಳನ್ನು ಪಾವತಿಗಾಗಿ ಸಲ್ಲಿಸುವಾಗ ತಾವುಗಳು ಒದಗಿಸಬೇಕಾದ ಪೂರಕ ದಾಖಲೆಗಳು ಹಾಗೂ ಅನುಸರಿಸಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ನೀಡಲಾದ ಸೂಚನೆಯ ಅನುಸಾರ ಒದಗಿಸತಕ್ಕದ್ದು.

1. ಪ್ರಸ್ತುತ ಖಜಾನೆ 2 ಮೂಲಕ ಹಣಪಾವತಿಸಬೇಕಾಗಿರುವುದರಿಂದ ಸಂಬಾವನೆ ಮತ್ತು ಪ್ರಯಾಣ ಭತ್ಯೆ /ದಿನ ಭತ್ಯೆ ಬಿಲ್ಲಿಗಳಿಗೆ ಪ್ರತ್ಯೇಕ ಲೆಕ್ಕ ಶೀರ್ಷಿಕೆಗಳ ಮುಖಾಂತರವೆ ಫಲಾನುಭವಿಗಳಿಗೆ ಹಣವನ್ನು ಸಂದಾಯ ಮಾಡಬೇಕಾಗಿರುತ್ತದೆ. **ಆದ್ದರಿಂದ ಸಂಭಾವನೆ ಮತ್ತು ಪ್ರಯಾಣ ಭತ್ಯೆ ಬಿಲ್ಲುಗಳನ್ನು ಪ್ರತ್ಯೇಕವಾಗಿ ಸಲ್ಲಿಸತಕ್ಕದ್ದು.**

2. ಸಂಭಾವನೆ ಮತ್ತು ಪ್ರಯಾಣ ಭತ್ಯೆ /ದಿನ ಭತ್ಯೆ ಬಿಲ್ಲುಗಳನ್ನು ಅಗತ್ಯ ದಾಖಲೆಗಳೊಂದಿಗೆ ಏಕ ಪ್ರತಿಯಲ್ಲಿ ಸಲ್ಲಿಸಿ ಒಂದು ಪ್ರತಿಯನ್ನು ತಮ್ಮಲ್ಲಿ ಇಟ್ಟುಕೊಳ್ಳುವುದು.

3. ಬಿಲ್ಲುಗಳನ್ನು ಪಾವತಿಗೆ ಅರ್ಹವಾದ ದಿನಾಂಕದಿಂದ 1 ವರ್ಷದ ಅವಧಿಯೊಳಗೆ ಸಲ್ಲಿಸುವುದು ಇಲ್ಲದಿದ್ದರೆ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧ 20 ಎ ಪ್ರಕಾರ ತಿರಸ್ಕೃತಗೊಳ್ಳುವುದು.

**ಕೇಂದ್ರ ಮೌಲ್ಯ ಮಾಪನ / ಮರು ಮೌಲಮಾಪನದ ಸಂಭಾವನೆ ಮತ್ತು ಪ್ರಯಾಣ ಭತ್ಯೆ /ದಿನ ಭತ್ಯೆ ಬಿಲ್ಲುಗಳಿಗೆ ಲಗತ್ತಿಸಬೇಕಾದ ಪೂರಕ ದಾಖಲೆಗಳು**

| ಪ್ರಯಾಣ ಭತ್ಯೆ / ದಿನಭತ್ಯೆ ಬಿಲ್ಲುಗಳು | ಸಂಭಾವನೆ ಬಿಲ್ಲುಗಳು |
|---|---|
| 1.ಮೌಲ್ಯ ಮಾಪನ ಕಾರ್ಯಕ್ಕೆ ಹಾಜರಾಗಲು ನೀಡಲಾದ ನೇಮಕಾತಿಯ ಆದೇಶದ ಪ್ರತಿ<br>2.ಮೂಲ ಹಾಜರಾತಿ ಪ್ರಮಾಣ ಪತ್ರ(Form X)<br>3.ದೃಢೀಕೃತ ವೇತನ ಪ್ರಮಾಣ ಪತ್ರ ಸಲ್ಲಿಸುವುದು ಇಲ್ಲವಾದಲ್ಲಿ ಕನಿಷ್ಠ ಮೂಲ ವೇತನವೆಂದು ಪರಿಗಣಿಸಲಾಗುವುದು.<br>4.ಪ್ರಯಾಣ ಭತ್ಯೆ ಬಿಲ್ಲುಗಳನ್ನು ಪ್ರತ್ಯೇಕವಾಗಿ ಪಾಲಿಟೆಕ್ನಿಕ್‌ವಾರು ವಿಂಗಡಿಸಿ ಸಲ್ಲಿಸುವುದು. (Collegewise) | 1.ಮೂಲ ಮೌಲ್ಯಮಾಪಕರ ಪ್ರಮಾಣ ಪತ್ರ (Form-IX) Valuer Certificate<br>2.ಏ.ಐ.ಸಿ.ಟಿ.ಇ ವೇತನವನ್ನು ಪಡೆಯುವುತ್ತಿಲ್ಲವೆಂಬ ಬಗ್ಗೆ ಪ್ರಾಶುಂಪಾಲರಿಂದ ದೃಢೀಕರಿಸಿದ ಪ್ರಮಾಣ ಪತ್ರ.<br>3.ಸಂಭಾವನೆ ಬಿಲ್ಲುಗಳನ್ನು ಪ್ರತ್ಯೇಕವಾಗಿ ಪಾಲಿಟೆಕ್ನಿಕ್‌ವಾರು ವಿಂಗಡಿಸಿ ಸಲ್ಲಿಸುವುದು. (College wise) |

ಪು.ತಿ.ನೋ

ಪ್ರತಿ ಬಿಲ್ಲಿನಲ್ಲಿ ಅವರ ಹೆಸರಿನ ಮುಂದೆ **Receipt ID, A/C No , IFSC Code** ಕಡ್ಡಾಯವಾಗಿ ನಮೂದಿತಕ್ಕದ್ದು. ಇಲ್ಲದಿದ್ದಲ್ಲಿ ಬಿಲ್ಲುಗಳನ್ನು ವಿಲೇಮಾಡಲು ಸಾಧ್ಯವಾಗದೆ ತಿರಸ್ಕರಿಸಲಾಗುವುದು.

ಮೇಲೆ ಸೂಚಿಸಲಾದಂತೆ ಬಿಲ್ಲುಗಳನ್ನು ಪಾವತಿಗೆ ಸಲ್ಲಿಸುವಾಗ ಮೇಲ್ಕಂಡ ದಾಖಲೆಗಳನ್ನು ಹೊರತುಪಡಿಸಿ ಇನ್ನಿತರ ಯಾವುದೇ ಝುರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ಬಿಲ್ಲಿನೊಂದಿಗೆ ಲಗತ್ತಿಸಬಾರದೆಂದು ಈ ಮೂಲಕ ಸೂಚಿಸಲಾಗಿದೆ.

26/11/2019

ಲೆಕ್ಕಾಧಿಕಾರಿ (ಪರೀಕ್ಷೆ)
ತಾಂತ್ರಿಕ ಪರೀಕ್ಷಾ ಮಂಡಳಿ,
ಬೆಂಗಳೂರು.

ಇವರಿಗೆ,

ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ

1. ಪ್ರಾಚಾರ್ಯರುಗಳು/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್(Receipt ID ಮಾಡದೆ ಇರುವ ಬಿಲ್ಲುಗಳನ್ನು ವಿಲೇ ಮಾಡಲು ಸಾಧ್ಯವಿರುವುದಿಲ್ಲ ಆದ್ದರಿಂದ Receipt ID ಮಾಡಿಯೇ ಬಿಲ್ಲುಗಳನ್ನು ಸಲ್ಲಿಸತಕ್ಕದ್ದು.

ಪ್ರತಿ:

1. ಇ-ಆಡಳಿತ ವಿಭಾಗಕ್ಕೆ ವೆಬ್ ಸೈಟನಲ್ಲಿ ಪ್ರಚುರ ಪಡಿಸಲು.
2. BTE Links Web Portal ನಲ್ಲಿ ಪ್ರಚುರ ಪಡಿಸಲು.

**ಕರ್ನಾಟಕ ಸರ್ಕಾರ**

ಸಂಖ್ಯೆ:ಬಿಟಿಇ/03/ಇಬಿಎಲ್(1) 2019-20

ಕಾರ್ಯದರ್ಶಿಯವರ ಕಚೇರಿ,
ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01,
ದಿನಾಂಕ: 25-11-2019.

**ಸುತ್ತೋಲೆ**

ವಿಷಯ: ಸರ್ಕಾರಿ ಅನುದಾನಿತ ಹಾಗೂ ಖಾಸಗಿ ಪಾಲಿಟೆಕ್ನಿಕ್‌ಗಳ ಬೋದಕ/ ಬೋಧಕೇತರ/ ಸಿಬ್ಬಂದಿಯವರು ಸೆಮಿಸ್ಟರ್‌ನ ಪ್ರಾಯೋಗಿಕ ಪರೀಕ್ಷೆಗಳ ಸಂಭಾವನೆ/ ಪ್ರಯಾಣ ಭತ್ಯೆ, ದಿನಭತ್ಯೆ ಬಿಲ್ಲುಗಳೊಂದಿಗೆ ಸಲ್ಲಿಸಬೇಕಾದ ಪೂರಕ ದಾಖಲೆ ಹಾಗೂ ಇನ್ನಿತರ ವಿಷಯಗಳ ಕುರಿತು.

-0-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಗಮನ ಸೆಳೆಯುತ್ತಾ ಪ್ರಾಯೋಗಿಕ ಪರೀಕ್ಷೆಯ ಮೌಲ್ಯ ಮಾಪನದ ಬಿಲ್ಲುಗಳನ್ನು ಪಾವತಿಗಾಗಿ ಸಲ್ಲಿಸುವಾಗ ತಾವುಗಳು ಒದಗಿಸಬೇಕಾದ ಪೂರಕ ದಾಖಲೆಗಳು ಹಾಗೂ ಅನುಸರಿಸಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಲಾದ ಕ್ರಮದಂತೆ ಒದಗಿಸತಕ್ಕದ್ದು.

1. ಪ್ರಸ್ತುತ ಖಜಾನೆ 2 ಮೂಲಕ ಹಣಪಾವತಿಸಬೇಕಾಗಿರುವುದರಿಂದ ಸಂಬಾವನೆ ಮತ್ತು ಪ್ರಯಾಣ ಭತ್ಯೆ /ದಿನ ಭತ್ಯೆ ಬಿಲ್ಲಿಗಳಿಗೆ ಪ್ರತ್ಯೇಕ ಲೆಕ್ಕ ಶೀರ್ಷಿಕೆಗಳ ಮುಖಾಂತರವೆ ಫಲಾನುಭವಿಗಳಿಗೆ ಹಣವನ್ನು ಸಂದಾಯ ಮಾಡಬೇಕಾಗಿರುತ್ತದೆ. ಆದ್ದರಿಂದ ಸಂಭಾವನೆ ಮತ್ತು ಪ್ರಯಾಣ ಭತ್ಯೆ ಬಿಲ್ಲುಗಳನ್ನು ಪ್ರತ್ಯೇಕವಾಗಿ ಸಲ್ಲಿಸತಕ್ಕದ್ದು.
2. ಸಂಭಾವನೆ ಮತ್ತು ಪ್ರಯಾಣ ಭತ್ಯೆ /ದಿನಭತ್ಯೆ ಬಿಲ್ಲುಗಳನ್ನು ಅಗತ್ಯ ದಾಖಲೆಗಳೊಂದಿಗೆ ಏಕ ಪ್ರತಿಯಲ್ಲಿ ಸಲ್ಲಿಸಿ ಒಂದು ಪ್ರತಿಯನ್ನು ತಮ್ಮಲ್ಲಿ ಇಟ್ಟುಕೊಳ್ಳುವುದು.
3. ಬಿಲ್ಲುಗಳನ್ನು ಪಾವತಿಗೆ ಅರ್ಹವಾದ ದಿನಾಂಕದಿಂದ 1 ವರ್ಷದ ಅವಧಿಯೊಳಗೆ ಸಲ್ಲಿಸುವುದು ಇಲ್ಲದಿದ್ದರೆ ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇಧ 20 ಎ ಪ್ರಕಾರ ತಿರಸ್ಕೃತಗೊಳ್ಳುವುದು.

**ಪ್ರಾಯೋಗಿಕ ಪರೀಕ್ಷೆಗಳ ಸಂಭಾವನೆ ಮತ್ತು ಪ್ರಯಾಣ ಭತ್ಯೆ /ದಿನ ಭತ್ಯೆ ಬಿಲ್ಲುಗಳಿಗೆ ಲಗತ್ತಿಸಬೇಕಾದ ಪೂರಕ ದಾಖಲೆಗಳು**

| ಪ್ರಾಯೋಗಿಕ ಪರೀಕ್ಷೆಗಳ ಪ್ರಯಾಣ ಭತ್ಯೆ/ದಿನಭತ್ಯೆ | ಪ್ರಾಯೋಗಿಕ ಪರೀಕ್ಷೆಗಳ ಸಂಭಾವನೆ |
|---|---|
| 1. ಪ್ರಾಯೋಗಿಕ ಪರೀಕ್ಷೆಗಳ ಪ್ರಯಾಣ ಭತ್ಯೆ ಬಿಲ್ಲುಗಳಿಗೆ ಕಾರ್ಯಕ್ಕೆ ನಿಯೋಜಿಸಿದ ಬಗ್ಗೆ ಸಂಬಂಧ ಪಟ್ಟ ಪ್ರಾಧಿಕಾರ ನೀಡಿರುವ ಜ್ಞಾಪನ ಪತ್ರ ಲಗತ್ತಿಸಬೇಕು.<br><br>2. ಮೂಲ ಹಾಜರಾತಿ ಪ್ರಮಾಣ ಪತ್ರ(Form X) ಸಲ್ಲಿಸುವುದು.<br><br>3. ದೃಢೀಕೃತ ವೇತನ ಪ್ರಮಾಣ ಪತ್ರ ಸಲ್ಲಿಸುವುದು ಇಲ್ಲವಾದಲ್ಲಿ ಕನಿಷ್ಠ ಮೂಲ ವೇತನವೆಂದು ಪರಿಗಣಿಸಲಾಗುವುದು. | 1. ಮುಖ್ಯ ಪ್ರಾಯೋಗಿಕ ಪರೀಕ್ಷೆಗೆ ಸಂಬಂಧಿಸಿದಂತೆ ಮುಖ್ಯ ಪರೀಕ್ಷಾ ಅಧೀಕ್ಷಕರಿಂದ ದೃಢೀಕರಿಸಲ್ಪಟ್ಟ ಪ್ರಾಯೋಗಿಕ ಪರೀಕ್ಷೆಯ ಬ್ಯಾಚ ಸಂಖ್ಯೆ ಮತ್ತು ವಿದ್ಯಾರ್ಥಿಗಳ ಸಂಖ್ಯೆಯನ್ನು ಹೊಂದಿರುವ ಪ್ರಮಾಣ ಪತ್ರ **(Conducting Certificate)**<br><br>2. ಕಛೇರಿ ಸಿಬ್ಬಂದಿಯ ಸಂಭಾವನೆಯ ಬಿಲ್ಲಿನಲ್ಲಿ ಸಿಬ್ಬಂದಿಯ ನಿಯೋಜನೆ ನಿಯಮಾನುಸಾರ ಇರುವಂತೆ ನೋಡಿಕೊಳ್ಳುವುದು. ಪರೀಕ್ಷಾ ಕೆಲಸಗಳಿಗೆ ನಿಯೋಜಿಸಿದ ಬಗ್ಗೆ ಅಧಿಕೃತ ಜ್ಞಾಪನವನ್ನುಬಿಲ್ಲಿನೊಂದಿಗೆ ಲಗತ್ತಿಸುವುದು. |

ಪು.ತಿ.ನೋ

| ಪ್ರಾಯೋಗಿಕ ಪರೀಕ್ಷೆಗಳ ಪ್ರಯಾಣ ಭತ್ಯೆ/ದಿನಭತ್ಯೆ | ಪ್ರಾಯೋಗಿಕ ಪರೀಕ್ಷೆಗಳ ಸಂಭಾವನೆ |
|---|---|
| 4 ಪ್ರಯಾಣ ಭತ್ಯೆ ಬಿಲ್ಲುಗಳನ್ನು ಪ್ರತ್ಯೇಕವಾಗಿ ಸಲ್ಲಿಸುವುದು. | 3. ಪರೀಕ್ಷಾ ಪೂರ್ವ ಸಿಬ್ಬಂದಿಯ ಬಿಲ್ಲಿಗೆ ಪ್ರತಿಯೊಬ್ಬ ಉಪನ್ಯಾಸಕರ ಮತ್ತು ಕಾರ್ಯಾಗಾರ ಸಿಬ್ಬಂದಿಯವರ **Abstract** ನ್ನು ಸಲ್ಲಿಸತಕ್ಕದ್ದು.<br>4. ಎ.ಐ.ಸಿ.ಟಿ.ಇವೇತನವನ್ನುಪಡೆಯುವುತ್ತಿಲ್ಲವೆಂಬ ಬಗ್ಗೆ ಪ್ರಾಶುಂಪಾಲರಿಂದ ದೃಢೀಕೃತ ಪ್ರಮಾಣ ಪತ್ರ.<br>5 ಸಂಭಾವನೆ ಬಿಲ್ಲುಗಳನ್ನು ಪ್ರತ್ಯೇಕವಾಗಿ ಸಲ್ಲಿಸುವುದು. |

ಪ್ರತಿ ಬಿಲ್ಲಿನಲ್ಲಿ ಅವರ ಹೆಸರಿನ ಮುಂದೆ **Receipt ID, A/C No , IFSC Code** ಕಡ್ಡಾಯವಾಗಿ ನಮೂದಿತಕ್ಕದ್ದು. ಇಲ್ಲದಿದ್ದಲ್ಲಿ ಬಿಲ್ಲುಗಳನ್ನು ವಿಲೇಮಾಡಲು ಸಾಧ್ಯವಾಗದೆ ತಿರಸ್ಕರಿಸಲಾಗುವುದು.

ಪ್ರಶ್ನೆ ಪತ್ರಿಕೆಗಳನ್ನು ಸಂರಕ್ಷಿಸುವ ಖಜಾನಾಧಿಕಾರಿಗಳು, ಆರಕ್ಷಕ ಠಾಣೆ ಸಿಬ್ಬಂದಿಯವರ ಸಂಭಾವನೆ ಬಿಲ್ಲುಗಳನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ಹಾಗೂ ಇದರೊಂದಿಗೆ **Receipt ID, A/C No , IFSC Code** ಕಡ್ಡಾಯವಾಗಿ ನಮೂದಿತಕ್ಕದ್ದು. ಇಲ್ಲದಿದ್ದಲ್ಲಿ ಬಿಲ್ಲುಗಳನ್ನು ವಿಲೇಮಾಡಲು ಸಾಧ್ಯವಾಗುವುದಿಲ್ಲ.

ಮೇಲೆ ಸೂಚಿಸಲಾದಂತೆ ಬಿಲ್ಲುಗಳನ್ನು ಪಾವತಿಗೆ ಸಲ್ಲಿಸುವಾಗ ಮೇಲ್ಕಂಡ ದಾಖಲೆಗಳನ್ನು ಹೊರತು ಪಡಿಸಿ ಇನ್ನಿತರ ಯಾವುದೇ ಝರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ಬಿಲ್ಲಿನೊಂದಿಗೆ ಲಗತ್ತಿಸಬಾರದೆಂದು ಈ ಮೂಲಕ ಸೂಚಿಸಲಾಗಿದೆ.

26/11/2019.

ಲೆಕ್ಕಾಧಿಕಾರಿ (ಪರೀಕ್ಷೆ)
ತಾಂತ್ರಿಕ ಪರೀಕ್ಷಾ ಮಂಡಳಿ,
ಬೆಂಗಳೂರು.

ಇವರಿಗೆ,

ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ

1. ಪ್ರಾಚಾರ್ಯರುಗಳು/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್(Receipt ID ಮಾಡದೆ ಇರುವ ಬಿಲ್ಲುಗಳನ್ನು ವಿಲೇ ಮಾಡಲು ಸಾಧ್ಯವಿರುವುದಿಲ್ಲ ಆದ್ದರಿಂದ Receipt ID ಮಾಡಿಯೇ ಬಿಲ್ಲುಗಳನ್ನು ಸಲ್ಲಿಸತಕ್ಕದ್ದು.

ಪ್ರತಿ:

1. ಇ–ಆಡಳಿತ ವಿಭಾಗಕ್ಕೆ ವೆಬ್ ಸೈಟನಲ್ಲಿ ಪ್ರಚುರ ಪಡಿಸಲು.
2. BTE Links Web Portal ನಲ್ಲಿ ಪ್ರಚುರ ಪಡಿಸಲು.